ನಾನು ಕಂಡ ವಿವೇಕಾನಂದ



ಡಾ.ಆರ್. ಬಾಲಸುಬ್ರಹ್ಮಣ್ಯಂ

# ಸ್ವಾಮೀಜಿ ಮತ್ತು ಸಮಯದ ಮಹಿಮೆ

ಸ್ವಾಮಿ ವಿವೇಕಾನಂದರು ಸ್ಥಾಪಿಸಿದ ರಾಮಕೃಷ್ಣ ಮಠವು ಪ್ರಾಮಾಣಿಕತೆ, ಪಾರದರ್ಶಕತೆ, ಸಮಯಪಾಲನೆಗೆ ಹೆಸರಾಗಿದೆ. ಯಾವುದೇ ಗಣ್ಯರು ಸಮಯಕ್ಕೆ ಸರಿಯಾಗಿ ಬಾರದಿದ್ದರೂ ಕಾಯದೆ ನಿಗದಿತ ವೇಳೆಗೇ ಕಾರ್ಯಕ್ರಮ ಆರಂಭಿಸುವುದನ್ನು ಮಠ ಅನುಸರಿಸಿಕೊಂಡು ಬಂದಿದೆ. ಸಂಸ್ಥೆಯು ಸಮಯ ನಿರ್ವಹಣೆ ಮತ್ತು ಶಿಸ್ತು ಪಾಲನೆ ಮಾಡಬೇಕೆಂದು ಸ್ವಾಮೀಜಿ ಒತ್ತಿ ಹೇಳಿದ್ದರು.

ಸ್ವಾಮೀಜಿಯವರು ರಾಮಕೃಷ್ಣ ಮಠಕ್ಕಾಗಿ ಕಠಿಣ ನಿಯಮಗಳು ಹಾಗೂ ನಿಯಂತ್ರಣ ಕ್ರಮಗಳನ್ನು ರೂಪಿಸಿದ್ದರಾದರೂ, ಸ್ವತಃ ಅವರ ಬದುಕಿನಲ್ಲಿ ಅವನ್ನು ಅನುಸರಿಸದ ಹಲವು ಉದಾಹರಣೆಗಳಿವೆ. ವಿಶೇಷವಾಗಿ, ಸಮಯಪಾಲನೆಗೆ ಸಂಬಂಧಿಸಿದಂತೆ ಅವರು ಉದಾಸೀನ ತೋರಿದ ನಿದರ್ಶನಗಳಿವೆ.

ಅಮೆರಿಕನ್ನರು ಸಮಯಪಾಲನೆ, ಅಚ್ಚುಕಟ್ಟುತನ (ವ್ಯವಸ್ಥೆ), ಪರಿಶ್ರಮಕ್ಕೆ ಎಷ್ಟು ಮಹತ್ವ ನೀಡುತ್ತಾರೆ ಹಾಗೂ ಅವನ್ನು ತಮ್ಮ ಸಾಮಾಜಿಕ ಜೀವನದಲ್ಲಿ ಹೇಗೆ ಅಳವಡಿಸಿಕೊಂಡಿದ್ದಾರೆ ಎಂಬುದು ಸ್ವಾಮೀಜಿ ಅವರಿಗೆ ಗೊತ್ತಿತ್ತು. ಬಹುತೇಕ ಅಮೆರಿಕನ್ನರು ಸಮಯಪಾಲನೆಯ ಗೀಳು ಹತ್ತಿಸಿಕೊಂಡಿದ್ದಾರೆ ಎಂಬುದನ್ನೂ ಅವರು ಮನಗಂಡಿದ್ದರು. ಇವತ್ತಿಗೂ ಅಮೆರಿಕದಲ್ಲಿ ಸಮಯ ಪಾಲನೆ ಒಂದು ಸಂಸ್ಕೃತಿ ಎಂಬಷ್ಟರ ಮಟ್ಟಿಗೆ ಬೇರುಬಿಟ್ಟಿದೆ. 'ಸಮಯ'ಕ್ಕೆ ಸಂಬಂಧಿಸಿದಂತೆ ಭಾರತೀಯರ ಉಪೇಕ್ಷೆಯನ್ನು ಒಪ್ಪಿಕೊಳ್ಳುವುದು ಅಮೆರಿಕನ್ನರಿಗೆ ಸಾಧ್ಯವಿಲ್ಲ.

ಸ್ವಾಮೀಜಿಯವರ ಅಮೆರಿಕನ್ ಅನುಯಾಯಿಗಳಲ್ಲಿ ಒಬ್ಬರಾದ ಥಾಮಸ್ ಆಲನ್ 1900ರ ಮಾರ್ಚ್ 25ರಂದು ನಡೆದ ಘಟನೆಯೊಂದರ ಕುರಿತು ಹೀಗೆ ಬರೆದಿದ್ದಾರೆ– 'ಫೋಸ್ಟ್ ಸ್ಟ್ರೀಟ್‌ನ ಯೂನಿಯನ್ ಸ್ಕ್ವೇರ್ ಸಭಾಂಗಣದಲ್ಲಿ ಮಧ್ಯಾಹ್ನ 3ಕ್ಕೆ ಉಪನ್ಯಾಸ ಎಂದು ಜಾಹೀರಾತು ಹಾಕಲಾಗಿತ್ತು. ಆದರೆ 3 ಗಂಟೆಗೆ ಸ್ವಾಮೀಜಿ ಅವರು ಇನ್ನೂ ಅಲ್ಲಿಗೆ ಆಗಮಿಸಿರಲಿಲ್ಲ. ಅವರೇನಾದರೂ ಬರುತ್ತಿದ್ದಾರಾ ಎಂದು ನೋಡಲು ಪದೇಪದೇ ಬೀದಿಗೆ ಹೋಗಿ ನೋಡುತ್ತಿದ್ದೆ. ಅಂತೂ ಕಡೆಗೆ 3.30ಕ್ಕೆ ಅವರು ನಿಧಾನವಾಗಿ ನಡೆದು ಬರುತ್ತಿರುವುದು ಕಾಣಿಸಿತು. ನಾನು ಅವರೆಡೆಗೆ ಹೋಗಿ, ಭೇಟಿಯಾಗಿ, ಸಭಾಂಗಣದೆಡೆಗೆ ಅವರ ಜತೆಯಲ್ಲೇ ಬಂದೆ. ಅಲ್ಲಿಗೆ ಹೋಗುವ ಮಾರ್ಗಮಧ್ಯೆ ಶೂಶೈನ್ ಸ್ಟ್ಯಾಂಡ್ ಕಣ್ಣಿಗೆ ಬಿತ್ತು.

ಶೂಗೆ ಪಾಲಿಷ್ ಮಾಡುವವನು ಕೆಲಸವಿಲ್ಲದೆ ಕುಳಿತಿರುವುದು ಸ್ವಾಮೀಜಿಯವರ ಕಣ್ಣಿಗೆ ಬಿತ್ತು. ತಮ್ಮ ಶೂಗಳನ್ನು ಪಾಲಿಷ್ ಮಾಡಿಸಿಕೊಳ್ಳಲು ಆತನ ಬಳಿಗೆ ತೆರಳಿದರು. ಉಪನ್ಯಾಸ ಕೇಳಲೆಂದು ಅದಾಗಲೇ ಅಲ್ಲಿಗೆ ಬಂದು ಕುಳಿತಿದ್ದವರ ಪರಿಸ್ಥಿತಿಯನ್ನು ಯೋಚಿಸಿ ನಾನು ಚಡಪಡಿಸುತ್ತಿದ್ದೆ. ಕೊನೆಗೂ ಸ್ವಾಮೀಜಿ ವೇದಿಕೆ ಹತ್ತಿದರು.



ಅಷ್ಟು ಹೊತ್ತು ಸಹನೆಯಿಂದ ಕಾಯುತ್ತಿದ್ದ ಶ್ರೋತೃಗಳಿಗೆ ಸ್ವಾಮೀಜಿ ಅವರನ್ನು ಪುನಃ ಪರಿಚಯಿಸಲಾಯಿತು.

ಇಂತಹ ಹಲವು ಪ್ರಸಂಗಗಳು ಅವರ ಬದುಕಿನಲ್ಲಿ ನಡೆದಿವೆ. ಕ್ಯಾಲಿಫೋರ್ನಿಯಾದ ಯೂನಿಟೇರಿಯನ್ ಚರ್ಚ್‌ನ ಪ್ಯಾಸ್ಟರ್ ಆಗಿದ್ದ ರೆವರೆಂಡ್ ಬೆಂಜಮಿನ್ ಫೇ ಮಿಲ್ಸ್ ಅವರು ಒಮ್ಮೆ, ವಿವೇಕಾನಂದರು ಸ್ಯಾನ್ ಫ್ರಾನ್ಸಿಸ್ಕೊಗೆ ವಾಪಸಾಗುತ್ತಿದ್ದಾಗ, 'ಸ್ವಾಮಿ, ರೈಲನ್ನು ಹಿಡಿಯಲು ನಾವು ಬೇಗ ಬೇಗ ಧಾವಿಸಬೇಕು' ಎಂದರು.

ಆದರೆ, ಇದಕ್ಕೆ ಯಾವುದೇ ಉದ್ವಿಗ್ನತೆ ತೋರದ ಸ್ವಾಮೀಜಿ, 'ಮತ್ತೊಂದು ರೈಲು ಇಲ್ಲವೇ?' ಎಂದು ಕೇಳಿ ಸುಮ್ಮನಾದರು. ಆತುರ, ತರಾತುರಿ ಮಾಡದೇ ಇದ್ದುದರಿಂದಾಗಿ ಅವರು ಕೆಲವಾರು ಸಲ ರೈಲುಗಳನ್ನು ತಪ್ಪಿಸಿಕೊಂಡದ್ದೂ ಉಂಟು. ಒಮ್ಮೆ, ಸ್ಟೀಮರ್ ತಪ್ಪಿ ಹೋಗುತ್ತದೆಂದು ಉದ್ವೇಗಗೊಂಡ ಅವರ ಅಮೆರಿಕನ್ ಭಕ್ತರೊಬ್ಬರು, 'ಸ್ವಾಮಿ, ನಿಮಗೆ ಸಮಯದ ಪರಿಕಲ್ಪನೆಯೇ ಇಲ್ಲ' ಎಂದರು. ಅದಕ್ಕೆ ಸ್ವಾಮೀಜಿ ಶಾಂತಚಿತ್ತದಿಂದ, 'ನನಗೆ ಸಮಯ ಜ್ಞಾನವಿಲ್ಲವೇ! ನೀವು ಅಮೆರಿಕನ್ನರು ಕಾಲದಲ್ಲಿ ಬದುಕುತ್ತೀರಿ; ಆದರೆ ಭಾರತೀಯರಾದ ನಾವು ಅನಂತತೆಯಲ್ಲಿ ಬದುಕುತ್ತೇವೆ' ಎಂದು ಪ್ರತಿಕ್ರಿಯಿಸಿದರು!

ರಾಮಕೃಷ್ಣ ಮಠವು ಅನುಸರಿಸುವ ಸಮಯಪಾಲನೆಗೆ ಬದ್ಧವಾಗಿ ನಡೆದುಕೊಳ್ಳುವುದು ನಿಜಕ್ಕೂ ಕಷ್ಟದ ವಿಷಯವೇ. ಇದು ಸಹ ಸ್ವಾಮಿ ವಿವೇಕಾನಂದರು ಹಾಕಿದ ಬುನಾದಿಯಿಂದಲೇ ಬಂದಿರಬೇಕು. ಅವರು ಬರೆದ ಪತ್ರವೊಂದರಿಂದ ಇದರ ಸುಳಿವು ಸಿಗುತ್ತದೆ. 'ನೀವು ಯಾವುದೇ ಕಾರ್ಯ ಮಾಡುವ ಮಾತು ಕೊಟ್ಟಿದ್ದರೆ ಅದನ್ನು ನೀವು ಒಪ್ಪಿಕೊಂಡಿದ್ದ ಸಮಯಕ್ಕೆ ಸರಿಯಾಗಿ ಮಾಡಬೇಕು. ಇಲ್ಲದಿದ್ದರೆ, ಜನ ನಿಮ್ಮ ಬಗೆಗಿನ ನಂಬಿಕೆಯನ್ನು ಕಳೆದುಕೊಳ್ಳುತ್ತಾರೆ' ಎಂದು 1895ರಲ್ಲಿ ಇಂಗ್ಲೆಂಡ್‌ನಿಂದ ಸ್ವಾಮಿ ಬ್ರಹ್ಮಾನಂದರಿಗೆ ಬರೆದ ಪತ್ರದಲ್ಲಿ ಇದೆ.

ಸಮಯಪಾಲನೆಗೆ ಸಂಬಂಧಿಸಿದಂತೆ ತಾವು ಏನು ಹೇಳಿದರೋ ಅದನ್ನು ಸ್ವತಃ ವಿವೇಕಾನಂದರು ಪಾಲಿಸುತ್ತಿರಲಿಲ್ಲ ಎಂದು ನಮಗೆ ಅನ್ನಿಸಬಹುದು; ಆದರೆ, ನಾವು ಇದನ್ನು ಬೇರೆ ಆಯಾಮದಿಂದ ನೋಡಬೇಕು. ಸ್ವಾಮೀಜಿ ಅವರು ಜೀವನವನ್ನು, ಆದಿ ಅಥವಾ ಅಂತ್ಯವಿಲ್ಲದ ಒಂದು ನಿರಂತರ ಹರಿವು ಎಂದು ಭಾವಿಸಿದ್ದರು. ಕೇವಲ 'ಗಡಿಯಾರದ ವೇಳೆ'ಯನ್ನೇ ದೃಷ್ಟಿಯಲ್ಲಿಟ್ಟುಕೊಂಡು ನೋಡಿದರೆ ಅವರು ಎಲ್ಲ ಸಂದರ್ಭಗಳಲ್ಲೂ ಸಮಯಪಾಲನೆಗೆ ಬದ್ಧರಾಗಿಲ್ಲದಿರಬಹುದು. ಆದರೆ ಅವರು ತಮ್ಮ ಬದುಕಿನಲ್ಲಿ ಮಾಡಿದ ಕಾರ್ಯಗಳನ್ನು ಎಳೆ ಎಳೆಯಾಗಿ ನೋಡುತ್ತಾ ಹೋದರೆ, ಅವರ ವೇಗದ ಅಗಾಧತೆ ಅಚ್ಚರಿ ಮೂಡಿಸುತ್ತದೆ. ಒಬ್ಬ ಸನ್ಯಾಸಿಯಾಗಿ ವೈಯಕ್ತಿಕ ಮಟ್ಟದಲ್ಲಿ ಸಮಯಪಾಲನೆಗೆ ಅಂಟಿಕೊಳ್ಳುವ ಅಗತ್ಯವಿಲ್ಲ ಎಂಬುದರ ಜತೆಗೆ, ಒಂದು ದೊಡ್ಡ ಸಂಸ್ಥೆಯ ವಿಷಯದಲ್ಲಿ ಈ ರೀತಿ ತಾನು ಅಶಿಸ್ತು ತೋರಬಾರದು ಎಂಬ ಅರಿವು ಅವರಿಗೆ ಇತ್ತು.

◆